ತಳಮಳ ಹುಟ್ಟಿತು. ಅಲ್ಲಿ ಕಂಡುಕೊಳ್ಳುತ್ತಿರುವುದೆಲ್ಲ ಕಳೆದುಕೊಂಡದ್ದು, ಶಬ್ದಸ್ವಾರ್ಥದಿಂದ ಆದ ನಷ್ಟ, ಇರುವುದನ್ನು ಬಿಟ್ಟು ಇರದುದಕ್ಕೆ ತೋರಿದ ಇಷ್ಟ. ಶಿವಾಸ್‌ರೀಗಲ್ ವಿಷಾದವನ್ನು ಬೆಳೆಸುತ್ತಿದೆ ಅನಿಸುವಾಗ ಕೆರೆಯ ಹತ್ತಿರ ಜಯರಾಮಯ್ಯ ಆಡಿದ್ದು ನೆನಪಾಯಿತು. ಆತ ಸ್ವಲ್ಪ ಅಪಾಯಕಾರಿ ಅನಿಸುತ್ತೆ, ಅವನ ಬಗ್ಗೆ ಇನ್ನೂ ಮಾಹಿತಿ ಕಲೆಹಾಕಬೇಕು ಅಂತ ನಿರ್ಧರಿಸುವಾಗ, 'ಊಟಕ್ಕೆ ಬರಬಾರದಾ... ಗಂಟೆ ಎಷ್ಟಾಯ್ತು ಗಮನವಿದೆಯಾ?' ಮುನಿಸು ತುಂಬಿದ ಕರೆ ಬಂತು.

ಬೆಳಗಿನ ತಿಂಡಿಯಾದಮೇಲೆ ಒಂದು ಕನ್ನಡ ಒಂದು ಇಂಗ್ಲಿಷ್ ಪತ್ರಿಕೆ ಓದುವುದು ರೂಢಿ. ಅಭ್ಯಾಸದ ಕೋಣೆಗೆ ಬಂದವರಿಗೆ ಮೇಜಿನಮೇಲೆ ಬಿಚ್ಚದೆ ಇಟ್ಟ ಪುಸ್ತಕಗಳ ಎರಡು ಕಂತೆಗಳು ಕಂಡವು. ಯಾವುದೊ ಸಂಘದವರು ಪ್ರಶಸ್ತಿಗೆ ಆಯ್ಕೆ ಮಾಡಲು ಕಳಿಸಿದವು. ಬರಿ ಪ್ರೊಫೆಸರಾಗಿದ್ದರೆ ಸಾಲದು; ಸಾರಸ್ವತ ವಲಯದಲ್ಲಿ ಪರಿಚಯವಿರಬೇಕು ಅನ್ನುವಾಸೆಯಲ್ಲಿ ತಾವು ವಿದ್ಯಾರ್ಥಿಗಳಿಗಾಗಿ ಓದಿದ್ದನ್ನೆ ಬಳಸಿ ಲೇಖನಗಳನ್ನು ಬರೆಯುತ್ತಿದ್ದರು. ಎರಡು ಐತಿಹಾಸಿಕ ಕಾದಂಬರಿ ಬರೆದಿದ್ದರು. ಪರಿಚಯದವರಿಂದ ಪ್ರಕಟಿಸಿ ಚರ್ಚೆಯಾಗುವಂತೆಯೂ ನೋಡಿಕೊಂಡಿದ್ದರು. ಸಭೆ ಸಮಾರಂಭಗಳಲ್ಲಿ ಪ್ರಚೋದಿತವಾಗಿ ಮಾತನಾಡಿ ಚಪ್ಪಾಳೆ ಬರುವ ಗುಂಪಿಗೆ ಸೇರಿದ್ದರು. ಅದರ ಪರಿಣಾಮ ಯಾವ್ಯಾವುದೊ ಸಂಘದವರು ಪ್ರಶಸ್ತಿಗೆ ಆಯ್ಕೆ ಮಾಡಿಕೊಡಿ ಅಂತ ಪುಸ್ತಕಗಳ ಗಂಟು ಕಳಿಸತೊಡಗಿದ್ದರು. ಸುರುವಿನಲ್ಲಿ ಹೆಮ್ಮೆ ಅನಿಸಿದ್ದು ಆಮೇಲೆ ಕರಕರೆ ಅನಿಸತೊಡಗಿತು. ಓದಿದರಾಯ್ತು ಅಂತ ಇಟ್ಟು ಬೇರೆ ಚಟುವಟಿಕೆಯಲ್ಲಿ ಕಾಲಹರಣವಾಗಿ ಮರೆತೆಹೋಗುತ್ತಿತ್ತು. ಇವತ್ತೂ ಪುಸ್ತಕ ಮುಟ್ಟುವ ಮನಸಾಗಲಿಲ್ಲ. ವಿಶೇಷವಾಗಿ ತಯಾರಿಸಿಟ್ಟುಕೊಂಡಿದ್ದ ಬಾಣಗಳಲ್ಲಿ ಒಂದನ್ನು ಬೆಳಗ್ಗೆ ವಾಕಿಂಗಿನಲ್ಲಿ ಪ್ರಯೋಗಿಸಿದ್ದರು. 'ನನ್ನ ಹೆಂಡತಿ ಪರಿಚಯದವರೊಬ್ಬರು ತಹಶೀಲ್ದಾರರಾಗಿದ್ರಂತೆ. ಅವರಿಗೆ ಪ್ರಮೋಶನ್ನಾಗುತ್ತ ಡೆಪ್ಯುಟಿ ಸೆಕ್ರೆಟರಿವರೆಗೂ ಏರಿದ್ರಂತೆ' ಈ ಜಯರಾಮಯ್ಯ ಒಂದೋ ಹಗರಣದಲ್ಲಿ ಸಿಕ್ಹಾಕ್ಕೊಂಡು ಅಮಾನತ್ತಾಗಿ ಪ್ರಮೋಶನ್ ತಪ್ಪಿಹೋಗಿರಬೇಕು; ಇಲ್ಲಾ ಕೆಳದರ್ಜೆಯಿಂದ ಏರಿ ಕೊನೆಯಲ್ಲಿ ತಹಶೀಲ್ದಾರಾಗಿರಬೇಕು. ಉತ್ತರಕ್ಕಾಗಿ ಕಾಯುವಾಗ ಆತ ತಡವರಿಸಿದ್ದು ಕಂಡಿತು. 'ಅಯ್ಯೋ... ಇಲಾಖೆಯಲ್ಲಿ ಏನು ಕೇಳತೀರ, ಅದೊಂದು ಕಥೆ...' ಅಂತ ನುಣುಚಿಕೊಂಡದ್ದು ಸುಖ ತರಿಸಿತ್ತು. ಅಷ್ಟಿಷ್ಟು ಕಲೆಹಾಕಿದ ಮಾಹಿತಿ ಪ್ರಕಾರ ಜಯರಾಮಯ್ಯ ಎರಡು ಮೂರು ದೊಡ್ಡ ಸೈಟುಗಳನ್ನು ಮಾಡಿದ್ದರು. ಮೂರಂತಸ್ತಿನ ಆಧುನಿಕ ಶೈಲಿಯ ಮನೆ ಕಟ್ಟಿಸಿದ್ದಾರೆ. ಪಕ್ಕದ ಇವರದೆ ಸೈಟಿನಲ್ಲಿ ತಂಗಿಯ ಮನೆಯಿದೆ. ಊರಲ್ಲಿದ್ದ ತೆಂಗು ಅಡಕೆಯ ತೋಟ ಇವರೆ ಕೊಂಡಿದ್ದು. ಮಕ್ಕಳಿಬ್ಬರು ವೈದ್ಯರು ಅಂತ ಅವರೆ ಹೇಳಿದ್ದರು. ಜೋರಾಗಿತ್ತು ಕಾಣತ್ತೆ ದರಬಾರು!... ಮನಸು ಲೆಕ್ಕ ಹಾಕಿತು.

ಬೆಳಗ್ಗೆ ವೀರಾಸಾಮಿ ಬಡಾವಣೆಯಲ್ಲಿ ಸಾಗಿದ್ದರು. 'ನಮಸ್ಕಾರ ಸಾರ್' ಸ್ವರಕ್ಕೆ ಅತ್ತಿತ್ತ ಹುಡುಕುವಾಗ ಮತ್ತೆ 'ನಾನು ಸಾರ್...' ಅಂದ ವ್ಯಕ್ತಿಯನ್ನು ಯಾರು ಅಂತ ನೋಡುವಾಗ ಗುರುತು ಸಿಕ್ಕಿತು. ಕೆರೆಯ ಪಕ್ಕ ತಾವು ಪಕೋಡ ತಿನ್ನುತ್ತಿದ್ದ ಕೈಗಾಡಿಯವ. ಬಾಣಲೆ ಸಮೇತ ಪಕೋಡದ ಪರಿಕರಗಳನ್ನು ಜೋಡಿಸಿಕೊಂಡು ಇವರಿಗಿಂತ ಮುಂದಿದ್ದ. 'ಅಪ್ಹಿಗ್ ಸೊಲ್ಪ ಆರಾಮಿಲ್ಲ. ಹೊಂಡಾದು ತಡಾ ಆಗೋಯ್ತು ಸಾರ್...' ಅನ್ನುತ್ತ ಗಡಿಬಿಡಿಯಲ್ಲಿ ಜೋರಾಗಿ ತಳ್ಳುತ್ತ ಮುಂದಾದ. ಈತ ಇಲ್ಲಿರ್ತಾನ?... ತಾವು ಸ್ಲಂ ಅಂತ ಪರಿಗಣಿಸೊ ಇದರಲ್ಲಿ ಮತ್ತೇನೇನಿದೆ ಅಂತ ಸುತ್ತೆಲ್ಲ ಕಣ್ಣು ಹಾಯಿಸಿದರು. ತೆಂಗಿನಕಾಯಿ, ಹುಲಿಗೆ ಸಾಮಾನು, ಕುರುಕಲು ತಿಂಡಿ, ಹೂವು ಬಾಳೆಹಣ್ಣು ಮಾರಲಿಟ್ಟ ಅಂಗಡಿಗಳಿದ್ದುದು ಕಾಣಿಸಿತು. ಮಿರ್ಚಿಭಜಿ, ಬೋಂಡ, ಇಡ್ಲಿ ಚಟ್ನಿ ಸಹ ಮಾರಾಟಕ್ಕಿತ್ತು. ಅಂಗಡಿ ಅನ್ನುವ ಹೆಸರಿಂದು ಅವರವರ ಸೌಲಭ್ಯಕ್ಕೆ ತಕ್ಕಂತೆ ನಿರ್ಮಿಸಿಕೊಂಡ ಆಕಾರವಿಲ್ಲದ, ಜಿಂಕ್‌ಶೀಟು ಟಾರಪಾಲಿನ್ ಯಾವುದು ಸಿಕ್ಕರೆ ಅದು ಬಳಸಿದ ಕೋಣೆಗಳಂತಹವು.